ಸಂಪುಟ : 11 ಸಂಚಿಕೆ: 46 ಪುಟ : 4+2 ಬೆಲೆ: 3.00 ಗುರುವಾರ ಮಾರ್ಚ್ 19 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 46 Pages : 4+2 Price : 3.00 Thursday March 19 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಶುಭಾಶಯಗಳು

"ಯುಗಾದಿಯ ಹೊಸ ಆಶೆಗಳು ಮತ್ತು ರಮಜಾನ್‌ನ ಪವಿತ್ರತೆಯ ಜೊತೆಗೆ ಜೀವನ ಸುಂದರವಾಗಲಿ."
"ಈ ಎರಡು ಹಬ್ಬಗಳು ನಮ್ಮಲ್ಲಿ ಪ್ರೀತಿ, ಶಾಂತಿ ಮತ್ತು ಸೌಹಾರ್ದತೆಯನ್ನು ಹೆಚ್ಚಿಸಲಿ."
"ಯುಗಾದಿ ಮತ್ತು ರಮಜಾನ್ ಒಂದೇ ಸಮಯದಲ್ಲಿ ಬಂದು ಒಗ್ಗಟ್ಟಿನ ಸಂದೇಶ ಸಾರುತ್ತಿವೆ."
"ಧರ್ಮ ಬೇರೆ ಆದರೂ ಹಬ್ಬಗಳ ಸಂತೋಷ ಒಂದೇ!
ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರು ಹಾಗೂ ಅಭಿಮಾನಿಗಳಿಗೆ ಯುಗಾದಿ ಮತ್ತು ರಮಜಾನ್ ಶುಭಾಶಯಗಳು!"



**ಬಿಡುವು**



ಯುಗಾದಿ ಪಾಡ್ಯದ ಪ್ರಯುಕ್ತ ಇಂದು ಕಚೇರಿಗೆ ಬಿಡುವು ಇದೆ. ಹೀಗಾಗಿ ನಾಳೆಯ ಸಂಚಿಕೆ ಪ್ರಕಟವಾಗುವುದಿಲ್ಲ.

–ಸಂಪಾದಕರು

### "ಗಾಬರಿ ಬೇಡ, ಜಾಗೃತಿ ಬೇಕು" – ಎನ್‌ಡಿಆರ್‌ಎಫ್ ಸಂದೇಶ

# ವಿಪತ್ತು ನಿರ್ವಹಣೆಯ ರೋಚಕ ಪ್ರಾತ್ಯಕ್ಷಿಕೆ!



■ ವಿಜಯಸಾಕ್ಷಿ ಸುದ್ದಿ, ಗದಗ

ವಿಪತ್ತು ಸಂದರ್ಭಗಳಲ್ಲಿ ಕ್ಷಿಪ್ರ ಹಾಗೂ ಸಮರ್ಪಕ ಕ್ರಮ ಎಷ್ಟು ಮುಖ್ಯ ಎಂಬುದನ್ನು ಜನರಿಗೆ ಮನದಟ್ಟು ಮಾಡಲು ಬುಧವಾರ ನಗರದ ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವಿಪತ್ತು ನಿರ್ವಹಣೆಯ ನೈಜ ಪ್ರಾತ್ಯಕ್ಷಿಕೆ ನಡೆಸಲಾಯಿತು.

ಎನ್‌ಡಿಆರ್‌ಎಫ್ ತಂಡದ ಮುಖ್ಯಸ್ಥ ಕಮಲೇಶ್ ಸಿಂಗ್ ನೇತೃತ್ವದಲ್ಲಿ ನಡೆದ ಈ ಅಭ್ಯಾಸದಲ್ಲಿ ಕಟ್ಟಡ ಕುಸಿತದ ಅಣಕು ಪರಿಸ್ಥಿತಿ ನಿರ್ಮಿಸಿ, ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸುವ ಕಾರ್ಯವನ್ನು ನೈಜ ರೀತಿಯಲ್ಲಿ ಪ್ರದರ್ಶಿಸಲಾಯಿತು. ವಿಶೇಷ ಸಾಧನಗಳ ಮೂಲಕ ಅವಶೇಷಗಳೊಳಗಿನ ವ್ಯಕ್ತಿಗಳನ್ನು ಪತ್ತೆಹಚ್ಚುವುದು, ಗಾಯಾಳುಗಳನ್ನು ಸುರಕ್ಷಿತವಾಗಿ ಹೊರತೆಗೆದು ತುರ್ತು ಚಿಕಿತ್ಸೆಗೆ ಸಾಗಿಸುವ ಕ್ರಮಗಳನ್ನು ಹಂತ ಹಂತವಾಗಿ ತೋರಿಸಲಾಯಿತು.

ಪ್ರಾತ್ಯಕ್ಷಿಕೆಯ ವೇಳೆ ಸಾರ್ವಜನಿಕರಿಗೆ ಕಟ್ಟಡ ಕುಸಿತದ ಸಂದರ್ಭಗಳಲ್ಲಿ ಗಾಬರಿಯಾಗದೆ ಸುರಕ್ಷಿತ ಸ್ಥಳಕ್ಕೆ ಸರಿಯುವುದು, ತಕ್ಷಣ ತುರ್ತು ಸೇವೆಗಳಿಗೆ ಮಾಹಿತಿ ನೀಡುವುದು ಹಾಗೂ ರಕ್ಷಣಾ ಕಾರ್ಯಕ್ಕೆ ಅಡ್ಡಿಯಾಗದಂತೆ ಸಹಕರಿಸುವ ಅಗತ್ಯತೆಯನ್ನು ವಿವರಿಸಲಾಯಿತು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು. ವಿದ್ಯಾರ್ಥಿಗಳಿಗೆ ಇದು ನೈಜ ಕಲಿಕೆಯ ಅನುಭವವಾಗಿ ಪರಿಣಮಿಸಿತು.

ಕಾರ್ಯಕ್ರಮದಲ್ಲಿ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಬಿ.ಸಿ. ಕರಿಗೌಡ್ರ, ಪ್ರಾಚಾರ್ಯ ರೇಖಾ ಸೋನಾವನೆ, ವಿಪತ್ತು ತಜ್ಞ ಶಿವಾನಂದ ರಾಜನಾಳ, ವಸಂತ ಮಡ್ಲೂರ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

"ವಿಪತ್ತುಗಳು ಯಾವಾಗ ಬೇಕಾದರೂ ಸಂಭವಿಸಬಹುದು. ಮುಂಚಿತ ಸಿದ್ಧತೆ ಇದ್ದರೆ ಜೀವಹಾನಿ ಹಾಗೂ ನಷ್ಟವನ್ನು ಕಡಿಮೆ ಮಾಡಬಹುದು. ಇದರಲ್ಲಿ ಸಾರ್ವಜನಿಕರ ಪಾತ್ರವೂ ಮಹತ್ವದ್ದಾಗಿದೆ"

–ಶ್ರೀಧರ್ ಸಿ ಎನ್, ಜಿಲ್ಲಾಧಿಕಾರಿಗಳು, ಗದಗ

### ತುರ್ತು ಸಿದ್ಧತೆ ಬಗ್ಗೆ ಅರಿವು

ಎನ್‌ಡಿಆರ್‌ಎಫ್ ತಂಡವು ರಕ್ಷಣಾ ಕಾರ್ಯಗಳಲ್ಲಿ ಬಳಸುವ ಸ್ಟ್ರೆಚರ್, ಕಟಿಂಗ್ ಉಪಕರಣಗಳು, ರೋಪ್‌ಗಳು ಹಾಗೂ ಲೈಫ್ ಡಿಟೆಕ್ಷನ್ ಸಾಧನಗಳ ಬಳಕೆಯನ್ನು ಪ್ರದರ್ಶಿಸಿತು. ಮನೆಮಟ್ಟದಲ್ಲೇ ತುರ್ತು ಕಿಟ್ ಸಿದ್ಧವಾಗಿಟ್ಟುಕೊಳ್ಳುವಂತೆ ಸಲಹೆ ನೀಡಲಾಯಿತು.

### ಗಮನ ಸೆಳೆದ ನಾಯಿಯ ಚಾತುರ್ಯ

ಅವಶೇಷಗಳಡಿ ಸಿಲುಕಿರುವವರನ್ನು ಪತ್ತೆಹಚ್ಚುವಲ್ಲಿ ತರಬೇತಿ ಪಡೆದ ನಾಯಿ ತನ್ನ ಘ್ರಾಣ ಶಕ್ತಿಯಿಂದ ರಕ್ಷಣಾ ತಂಡಕ್ಕೆ ನೆರವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.



# ಶಾಂತವಾಗಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಬುಧವಾರ ಆರಂಭವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಯಾವುದೇ ತೊಂದರೆ ಇಲ್ಲದೆ ಶಾಂತ ಹಾಗೂ ಸುವ್ಯವಸ್ಥಿತವಾಗಿ ನಡೆದವು.

ಪಟ್ಟಣದ ಪರೀಕ್ಷಾ ಕೇಂದ್ರಗಳಿಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರೀಕ್ಷಾರ್ಥಿಗಳಿಗೆ ಹೂಗಳನ್ನು ನೀಡುವ ಮೂಲಕ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕ ಆರ್.ಬಿ. ಜೋಶಿ, ಬಸವರಾಜ ಯರಗುಪ್ಪಿ, ಉಮೇಶ್ ಹುಚ್ಚಯ್ಯನವರಮಠ, ಉಮೇಶ್ ನೇಕಾರ ಹಾಗೂ ಮುಖ್ಯ ಅಧೀಕ್ಷಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.

▶▶ 3ನೇ ಪುಟಕ್ಕೆ






## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹೂವು ನೀಡಿ ಸ್ವಾಗತಿಸಿದ ತಹಸೀಲ್ದಾರ್ ಕೆ. ರಾಘವೇಂದ್ರ ರಾವ್



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಬುಧವಾರದಿಂದ ಆರಂಭವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೊದಲ ದಿನ ಶಿರಹಟ್ಟಿಯಲ್ಲಿ ವಿದ್ಯಾರ್ಥಿಗಳಿಗೆ ವಿಶಿಷ್ಟ ಸ್ವಾಗತ ಲಭಿಸಿತು. ಪರೀಕ್ಷಾ ಕೇಂದ್ರಕ್ಕೆ ಆಗಮಿಸಿದ ವಿದ್ಯಾರ್ಥಿಗಳಿಗೆ ಹೂ ನೀಡಿ ತಹಶೀಲ್ದಾರ ಕೆ. ರಾಘವೇಂದ್ರ ರಾವ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್. ನಾಣ್ಕೇನಾಯ್ಕ ಆತ್ಮೀಯವಾಗಿ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ತಹಸೀಲ್ದಾರ್ ರಾಘವೇಂದ್ರ ರಾವ್, ವಿದ್ಯಾರ್ಥಿಗಳು ಪರೀಕ್ಷೆ ಬಗ್ಗೆ ಯಾವುದೇ ಆತಂಕಕ್ಕೆ ಒಳಗಾಗದೆ ಆತ್ಮವಿಶ್ವಾಸದಿಂದ ಎದುರಿಸಬೇಕು. ಎಸ್‌ಎಸ್‌ಎಲ್‌ಸಿ ಜೀವನದ ಮಹತ್ವದ ಹಂತವಾಗಿದ್ದು, ಉತ್ತಮ ಅಂಕಗಳನ್ನು ಪಡೆದು ಪೋಷಕರು ಹಾಗೂ ತಾಲೂಕಿಗೆ ಕೀರ್ತಿ ತರುವಂತೆ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ವೆಬ್‌ಕಾಸ್ಟಿಂಗ್ ವ್ಯವಸ್ಥೆ ಸೇರಿದಂತೆ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಿ, ಪರೀಕ್ಷೆಯ ಪ್ರಕ್ರಿಯೆಗಳು ಸುಗಮವಾಗಿ ನಡೆಯಲು ಅಗತ್ಯ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್. ನಾಣ್ಕೇನಾಯ್ಕ ಮಾತನಾಡಿ, ತಾಲೂಕಿನಲ್ಲಿ ಒಟ್ಟು 1207 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಮೊದಲ ದಿನ 1193 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. 14 ವಿದ್ಯಾರ್ಥಿಗಳು ಗೈರಾಗಿದ್ದಾರೆ ಎಂದು ತಿಳಿಸಿದ್ದಾರೆ.

# ಪ್ರಕೃತಿಯನ್ನು ಅರಳಿಸುವ ಹಬ್ಬ – ಯುಗಾದಿ

ಭಾರತ ದೇಶದ ಜೀವಾಳವೇ ಹಬ್ಬಗಳು ಎಂದರೆ ತಪ್ಪಾಗಲಾರದು. ಋಷಿ–ಮುನಿಗಳು ತಪಸ್ಸು ಮಾಡಿದ ಪವಿತ್ರ ಭೂಮಿ, ಹಲವು ಸಂಪ್ರದಾಯಗಳ ತವರೂರು, ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಭವ್ಯ ರಾಷ್ಟ್ರ ನಮ್ಮ ಭಾರತ. ಇಲ್ಲಿ ಪ್ರತಿಯೊಂದು ಹಬ್ಬಕ್ಕೂ ಒಂದು ವೈಜ್ಞಾನಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಹಿನ್ನೆಲೆ ಇದೆ.

ಅಂತಹ ಹಬ್ಬಗಳಲ್ಲಿ ಪ್ರಕೃತಿಯೊಂದಿಗೆ ಮಾನವನ ಆತ್ಮೀಯ ಬಾಂಧವ್ಯವನ್ನು ಸಾರುವ ಮಹತ್ವದ ಹಬ್ಬವೇ ಯುಗಾದಿ.

ಪ್ರಕೃತಿಯಲ್ಲಿ ವರ್ಷಕ್ಕೆ ಒಂದು ಬಾರಿ ಮಹತ್ತರ ಬದಲಾವಣೆ ಕಾಣುತ್ತದೆ. ಶಿಶಿರ ಋತು ಅಂತ್ಯಗೊಂಡು ವಸಂತ ಋತು ಆರಂಭವಾಗುವ ಈ ಸಂದರ್ಭದಲ್ಲಿ ಮರಗಿಡಗಳು ಹಳೆಯ ಎಲೆಗಳನ್ನು ಬಿಟ್ಟು ಹೊಸ ಚಿಗುರುಗಳನ್ನು ಹೊಳೆಯುತ್ತವೆ. ಹಸಿರಿನಿಂದ ಹೊದಿದ ಭೂಮಿ ಮದುವಣಗಿತ್ತಿಯಂತೆ ಕಂಗೊಳಿಸುತ್ತದೆ. ಕೋಗಿಲೆಯ ಮಧುರ ಕೂಗು, ತಂಪಾದ ಗಾಳಿ, ಅರಳಿದ ಹೂವುಗಳ ಸುವಾಸನೆ—ಇವೆಲ್ಲವೂ ಹೊಸ ಜೀವನದ ಸಂಕೇತಗಳಾಗಿವೆ. ಈ ನೈಸರ್ಗಿಕ ಹರ್ಷದ ಕ್ಷಣವನ್ನು ಆಚರಿಸುವ ಹಬ್ಬವೇ ಯುಗಾದಿ.

**" ಯುಗ ಯುಗಾದಿ ಕಳೆದರೂ**
**ಯುಗಾದಿ ಮರಳಿ ಬರುತಿದೆ**
**ಹೊಸ ವರ್ಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ "**

ಎಂಬ ಕವಿ ದ.ರಾ. ಬೇಂದ್ರೆಯವರ ಕವಿತೆಯಂತೆ, ಯುಗಾದಿ ಎಂದರೆ ಹೊಸ ಆಶೆಗಳು, ಹೊಸ ಕನಸುಗಳು ಮತ್ತು ಹೊಸ ಆರಂಭಗಳ ಸಂಕೇತವಾಗಿದೆ.

"ಯುಗಾದಿ" ಎಂಬ ಪದವು "ಯುಗ – ಆದಿ" ಎಂಬ ಸಂಧಿಯಿಂದ



ಉಗಮಿಸಿದ್ದು, "ಹೊಸ ಯುಗದ ಪ್ರಾರಂಭ" ಎಂಬ ಅರ್ಥವನ್ನು ಹೊಂದಿದೆ. ಹಿಂದೂ ಪುರಾಣಗಳ ಪ್ರಕಾರ ಸೃಷ್ಟಿಕರ್ತ ಬ್ರಹ್ಮನು ಈ ದಿನವೇ ಸೃಷ್ಟಿಯನ್ನು ಆರಂಭಿಸಿದನೆಂಬ ನಂಬಿಕೆ ಇದೆ. ಆದ್ದರಿಂದ ಈ ದಿನವನ್ನು ಅತ್ಯಂತ ಪವಿತ್ರ ಮತ್ತು ಶುಭದಿನವೆಂದು ಪರಿಗಣಿಸಲಾಗುತ್ತದೆ.

2026ರಲ್ಲಿ ಪರಾಭವನಾಮ ಸಂವತ್ಸರದ ಚೈತ್ರ ಮಾಸದ ಶುಕ್ಲ ಪಾಡ್ಯ ದಿನವಾದ ಮಾರ್ಚ್ 19ರಂದು ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ.

ವರ್ಷದಲ್ಲಿ ಮೂರುವರೆ ಶುಭ ಮುಹೂರ್ತಗಳಿದ್ದು—ಯುಗಾದಿ, ಅಕ್ಷಯ ತೃತೀಯ, ವಿಜಯದಶಮಿ ಹಾಗೂ ಬಲಿ ಪಾಡ್ಯ (ಅರ್ಧ ದಿನ)—ಇವುಗಳಲ್ಲಿ ಯುಗಾದಿಯೇ ಹೊಸ ವರ್ಷದ ಪ್ರಾರಂಭವಾಗಿರುವುದರಿಂದ ವಿಶೇಷ ಸ್ಥಾನಮಾನ ಹೊಂದಿದೆ.

ಯುಗಾದಿ ದಕ್ಷಿಣ ಭಾರತದ ಪ್ರಮುಖ ಹಬ್ಬವಾಗಿದ್ದು, ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣಗಳಲ್ಲಿ ವಿಶೇಷವಾಗಿ ಆಚರಿಸಲಾಗುತ್ತದೆ. ಆಂಗ್ಲ ಹೊಸ ವರ್ಷವನ್ನು ಜನವರಿ 1ರಂದು ಆಚರಿಸಿದರೆ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೊಸ ವರ್ಷದ ಪ್ರಾರಂಭವೇ ಯುಗಾದಿ. ಇದು ಕೇವಲ ದಿನದ ಬದಲಾವಣೆಯಲ್ಲ, ಬದುಕಿನ ಹೊಸ ಅಧ್ಯಾಯದ ಆರಂಭವಾಗಿದೆ.

ಯುಗಾದಿಯನ್ನು ಚಾಂದ್ರಮಾನ ಮತ್ತು ಸೌರಮಾನ ಪದ್ಧತಿಗಳ ಪ್ರಕಾರ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ಚಾಂದ್ರಮಾನ ಪದ್ಧತಿಯಂತೆ ಯುಗಾದಿ ಆಚರಿಸಿದರೆ, ತಮಿಳುನಾಡು ಮತ್ತು ಕೇರಳದಲ್ಲಿ ಸೌರಮಾನ ಪದ್ಧತಿ ಅನುಸರಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ "ಗುಡಿ ಪಾಡ್ಯ", ಉತ್ತರ ಭಾರತದ ಕೆಲವು ಭಾಗಗಳಲ್ಲಿ "ಬೈಸಾಖಿ" ಎಂದು ಕರೆಯಲಾಗುತ್ತದೆ. ಹೆಸರಿನಲ್ಲಿ ವ್ಯತ್ಯಾಸ ಇದ್ದರೂ, ಹಬ್ಬದ ಉದ್ದೇಶ ಒಂದೇ–ಹೊಸತನವನ್ನು ಸ್ವೀಕರಿಸುವುದು.

**ಯುಗಾದಿ ಆಚರಣೆ ಮತ್ತು ಸಂಪ್ರದಾಯಗಳು:** ಯುಗಾದಿ ದಿನದಂದು ಮನೆಗಳನ್ನು ಶುಚಿಗೊಳಿಸಿ, ಸುಣ್ಣ–ಬಣ್ಣ ಬಳಿದು ಅಲಂಕರಿಸುತ್ತಾರೆ. ಮನೆಯ ಮುಂದೆ ರಂಗೋಲಿ ಹಾಕಿ, ಬಾಗಿಲಿಗೆ ಮಾವಿನ ಎಲೆ ಮತ್ತು ಬೇವಿನ ತೋರಣಗಳನ್ನು ಕಟ್ಟುತ್ತಾರೆ. ಇದು ಶುಭದ ಸಂಕೇತವಾಗಿದೆ.

ಈ ದಿನ ಬ್ರಹ್ಮ ಮುಹೂರ್ತದಲ್ಲಿ ಎದ್ದು ಅಭ್ಯಂಜನ ಸ್ನಾನ ಮಾಡುವುದು ಮುಖ್ಯ. ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವುದರಿಂದ ದೇಹ ಮತ್ತು ಮನಸ್ಸಿಗೆ ತಾಜಾತನ ದೊರೆ–ಯುತ್ತದೆ. ನಂತರ ಸೂರ್ಯನಮಸ್ಕಾರ ಮಾಡಿ, ದೇವರ ಪೂಜೆ ಸಲ್ಲಿಸಿ, ಕುಲದೇವತೆಯನ್ನು ಆರಾಧಿಸುತ್ತಾರೆ.

ಯುಗಾದಿಯ ವಿಶೇಷವೆಂದರೆ "ಬೇವು–ಬೆಲ್ಲ". ಬೇವಿನ ಕಹಿ ಹಾಗೂ ಬೆಲ್ಲದ ಸಿಹಿ–ಇವು ಜೀವನದ ದುಃಖ ಮತ್ತು ಸುಖಗಳ ಸಂಕೇತಗಳಾಗಿವೆ. ಜೀವನದಲ್ಲಿ ಬರುವ ಕಷ್ಟ–ಸಂತೋಷಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂಬ ಸಂದೇಶವನ್ನು ಈ ಆಚರಣೆ ನೀಡುತ್ತದೆ.

ಹಿರಿಯರಿಂದ ಪಂಚಾಂಗ ಪಠಣ ಮಾಡಿಸುವುದು ಯುಗಾದಿಯ ಮತ್ತೊಂದು ಪ್ರಮುಖ ಆಚರಣೆ. ಪಂಚಾಂಗವು ಹಿಂದೂ ಕ್ಯಾಲೆಂಡರ್ ಆಗಿದ್ದು, ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳ ವಿವರಗಳನ್ನು ನೀಡುತ್ತದೆ. ಇದು ಭವಿಷ್ಯದ ಯೋಜನೆಗಳಿಗೆ ಮಾರ್ಗದರ್ಶಕವಾಗಿದೆ.

ಹೊಸ ಬಟ್ಟೆ ಧರಿಸುವುದು, ಹಣೆಗೆ ತಿಲಕವಿಡುವುದು, ಹೊಸ ಪಂಚಾಂಗಕ್ಕೆ ಪೂಜೆ ಸಲ್ಲಿಸುವುದು–ಚಟಟವು ಹೊಸತನವನ್ನು ಸ್ವೀಕರಿಸುವ ಸಂಕೇತಗಳಾಗಿವೆ. ಸಂಜೆ ಗೋದುಳಿ ವೇಳೆಯಲ್ಲಿ ಕುಟುಂಬದವರು ಸೇರಿ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ.

**ಯುಗಾದಿಯ ಮಹತ್ವ:** ಯುಗಾದಿ ಕೇವಲ ಹಬ್ಬವಲ್ಲ, ಅದು ಬದುಕಿನ ತತ್ವವನ್ನು ಹೇಳುವ ಮಹತ್ವದ ದಿನ. ಹಳೆಯದನ್ನು ಮರೆತು ಹೊಸದನ್ನು ಸ್ವೀಕರಿಸುವ ಮನೋಭಾವವನ್ನು ಬೆಳೆಸುತ್ತದೆ.

ಪ್ರಕೃತಿ ಹೇಗೆ ಹಳೆಯ ಎಲೆಗಳನ್ನು ಬಿಟ್ಟು ಹೊಸ ಚಿಗುರುಗಳನ್ನು ತರುತ್ತದೋ, ಹಾಗೆಯೇ ನಾವು ನಮ್ಮ ಜೀವನದಲ್ಲಿನ ಹಳೆಯ ದುಃಖ, ದ್ವೇಷಗಳನ್ನು ಬಿಟ್ಟು ಹೊಸ ಆಶಾವಾದದೊಂದಿಗೆ ಮುಂದೆ ಸಾಗಬೇಕು ಎಂಬ ಸಂದೇಶವನ್ನು ನೀಡುತ್ತದೆ.

ಯುಗಾದಿ ನಮಗೆ ಸಕಾರಾತ್ಮಕ ಚಿಂತನೆ, ಸಹನಶೀಲತೆ ಮತ್ತು ಸಮತೋಲನದ ಜೀವನವನ್ನು ಕಲಿಸುತ್ತದೆ. ಒಟ್ಟಾರೆಯಾಗಿ ಯುಗಾದಿ ಹಬ್ಬವು ಪ್ರಕೃತಿ, ಸಂಸ್ಕೃತಿ ಮತ್ತು ಜೀವನದ ತತ್ವಗಳ ಸಂಯೋಜನೆಯಾಗಿದೆ. ಇದು ನಮ್ಮ ಜೀವನದಲ್ಲಿ ಹೊಸತನ, ಸಂತೋಷ ಮತ್ತು ಆಶಾವಾದವನ್ನು ತುಂಬುವ ಹಬ್ಬವಾಗಿದೆ.

ಆದ್ದರಿಂದ ಈ ಯುಗಾದಿಯನ್ನು ನಾವು ಎಲ್ಲರೂ ಹರ್ಷದಿಂದ ಆಚರಿಸಿ, ನಮ್ಮ ಜೀವನದಲ್ಲಿ ಹೊಸ ಬೆಳಕನ್ನು ತ–ರೋಣ. ಎಲ್ಲರ ಬಾಳಲ್ಲಿ ಸಂತೋಷ ನೆಲೆಸಲಿ, ಮಳೆ–ಬೆಳೆ ಚೆನ್ನಾಗಿ ಬರಲಿ, ಸಮಾಜದಲ್ಲಿ ಶಾಂತಿ–ಸೌಹಾರ್ದತೆ ವೃದ್ಧಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ.



**–ಎಸ್. ಕೆ. ಆಡಿನ**
ಶಿಕ್ಷಕರು, ಹೊಳೆಆಲೂರ

## ನವಲಗುಂದ ಕ್ಷೇತ್ರದಲ್ಲಿ ನಡೆದ ಜೆಡಿಎಸ್ ಪದಾಧಿಕಾರಿಗಳ ಪದಸ್ವೀಕಾರ ಸಮಾರಂಭದಲ್ಲಿ ಅಲ್ಕೋಡ ಹನುಮಂತಪ್ಪ

# "ಜೆಡಿಎಸ್‌ಗೆ ಯಾವ ಪಕ್ಷವೂ ಸರಿಸಾಟಿಯಲ್ಲ"



"ರೈತರಿಗೆ ಸಬ್ಸಿಡಿ, ಸಾಲಮನ್ನಾ ನೀಡಿದ ನಿಜವಾದ ಸರ್ಕಾರ ಜೆಡಿಎಸ್; ಮತದಾನದ ಪಾವಿತ್ರ್ಯತೆ ಉಳಿಸಿಕೊಳ್ಳಿ"
**– ಅಲ್ಕೋಡ ಹನುಮಂತಪ್ಪ,** ಜೆಡಿಎಸ್ ಮುಖಂಡ.

**■ವಿಜಯಸಾಕ್ಷಿ ಸುದ್ದಿ, ಅಣ್ಣಿಗೇರಿ**

ನವಲಗುಂದ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪದಾಧಿಕಾರಿಗಳ ಪದಸ್ವೀಕಾರ ಸಮಾರಂಭವು ಸ್ಥಳೀಯ ಎಪಿಎಂಸಿ ಸಮೀಪದ ಬಾಪೂಜಿ ಸದನದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಪದಾಧಿಕಾರಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಿ ಮಾತನಾಡಿದ ಜೆಡಿಎಸ್ ನಾಯಕ ಹಾಗೂ ಮಾಜಿ ಸಚಿವ ಅಲ್ಕೋಡ ಹನುಮಂತಪ್ಪ, ದೇಶ ಮತ್ತು ರಾಜ್ಯದಲ್ಲಿ ಹೆಚ್.ಡಿ. ದೇವೇಗೌಡ ಹಾಗೂ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಆಡಳಿತ ಅಲ್ಪಾವಧಿಯದ್ದಾಗಿದ್ದರೂ ಮರೆಯಲಾಗದ ಆಡಳಿತವಾಗಿದೆ ಎಂದು ಹೇಳಿದರು.

ಜೆಡಿಎಸ್‌ಗೆ ದೇಶದಲ್ಲಿ ಯಾವ ಪಕ್ಷವೂ ಸರಿಸಾಟಿಯಲ್ಲ ಎಂದು ಹೇಳಿದ ಅವರು, ರೈತರಿಗೆ ಸಬ್ಸಿಡಿ ನೀಡುವುದು ಹಾಗೂ ಸಾಲಮನ್ನಾ ಮಾಡುವಂತಹ ಮಹತ್ವದ ಯೋಜನೆಗಳನ್ನು ಜಾರಿಗೆ ತಂದವರು ದೇವೇಗೌಡ ಮತ್ತು ಕುಮಾರಸ್ವಾಮಿ ಮಾತ್ರ ಎಂದು ಅಭಿಪ್ರಾಯಪಟ್ಟರು. ಮುಸ್ಲಿಮರನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಂಡಿರುವ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಅವರ ನಿಜವಾದ ಹಿತ ಕಾಪಾಡಿದ್ದು ಜೆಡಿಎಸ್ ಮಾತ್ರ ಎಂದು ಹೇಳಿದರು.

ಪ್ರಜಾಪ್ರಭುತ್ವದಲ್ಲಿ ಮತದಾನದ ಮಹತ್ವವನ್ನು ಒತ್ತಿಹೇಳಿದ ಅವರು, ಜನರು ಉತ್ತಮ ಯೋಜನೆಗಳನ್ನು ನೀಡುವವರಿಗೆ ಮತ ನೀಡಿ ತಮ್ಮ ಮತದ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜೆಡಿಎಸ್ ಧಾರವಾಡ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಬಿ. ಗಂಗಾಧರಮಠ ಮಾತನಾಡಿ, ಬಿಜೆಪಿ ಜೊತೆ ಮೈತ್ರಿ ಹೊಂದಿದ್ದರೂ ಜೆಡಿಎಸ್ ತನ್ನ ಮೂಲ ಸಿದ್ಧಾಂತಗಳಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ಸಿ.ಎಸ್. ಪಾಟೀಲ, ಶಿವಶಂಕರ ಕಲ್ಲೂರ, ಜಿ.ಎನ್. ತೋಟದ, ಎಂ.ಎಸ್. ಪಾಟೀಲ, ಪ್ರಕಾಶ ಅಂಗಡಿ, ಶ್ರೀಶೈಲ ಮೂಲಿಮನಿ, ಡಿ.ಎಂ. ಶಲವಡಿ, ಅಬ್ಬಾಸ್ ಅಲಿ ದೇವರುಡು ಸೇರಿದಂತೆ ಅನೇಕ ಮುಖಂಡರು ಮಾತನಾಡಿದರು. ರೇಖಾ ನಾಯ್ಕರ, ವಿನಾಯಕ ಗಾಡಿವಡ್ಡರ, ಬಸವರಾಜ ದನಿಗೊಂಡ, ಮೌಲಾಸಾಬ್ ವೈದ್ಯ, ಚೆನ್ನಯ್ಯ ಹಿರೇಮಠ ಸೇರಿದಂತೆ ಅಣ್ಣಿಗೇರಿ ಹಾಗೂ ನವಲಗುಂದ ತಾಲೂಕಿನ ಮುಖಂಡರು ಹಾಗೂ ಹುಬ್ಬಳ್ಳಿ ಶಿರುಗುಪ್ಪಿ ಬ್ಲಾಕ್‌ನ ಪ್ರಮುಖರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ವೀರೇಶ ಶಾನುಭೋಗರ ಅಧ್ಯಕ್ಷತೆ ವಹಿಸಿದ್ದರು.

# ಬೇವು ಬೆಲ್ಲದ ಸಂಭ್ರಮವೇ ಯುಗಾದಿ ಹಬ್ಬ..!

ಚೈತ್ರ ಮಾಸದಲ್ಲಿ ಬರುವ ಮೊದಲ ಹಬ್ಬ ಯುಗಾದಿ, ಹಿಂದೂ ಸಂಪ್ರದಾಯದ ಹೊಸ ವರ್ಷ ಯುಗಾದಿ ಹಬ್ಬ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ವರ್ಷಕ್ಕೆ ಹೊಸದು ಹೊಸದು ತರುತ್ತಿದೆ.

ಈ ಯುಗಾದಿ ಹಬ್ಬ ನಮಗೆ ಮಾತ್ರವಲ್ಲ, ಪ್ರಕೃತಿಗೊಚರಿ ಸಹ ಹೊಸ ವರ್ಷವಾಗಿರುತ್ತದೆ. ಚೈತ್ರ ಮಾಸದಿಂದ ಪ್ರಾರಂಭವಾಗುವ. ಈ ಮಾಸದಲ್ಲಿ ಮರ ಗಿಡಗಳು ಚಿಗರೊಡೆದು ಪ್ರಕೃತಿಯೂ ಅಚ್ಚ ಹಸಿರಿನಿಂದ ಕಂಗೊಳಿಸುತ್ತದೆ. ಬೇವು ಬೆಲ್ಲದ ಸಂಭ್ರಮವೇ ಈ ಯುಗಾದಿ ಹಬ್ಬ ಮನೆಯಂಗಳದಲ್ಲಿ ಸಗಣಿ ಸಾರಿಸಿ ರಂಗೋಲಿ ಬಿಡಿಸಿ ಬಣ್ಣ ಮತ್ತು ಹೂವುಗಳಿಂದ ಅಲಂಕರಿಸಲಾಗುತ್ತದೆ.

ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಬೇವು ಮಾವಿನ ತಳಿರು ತೋರಣ ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಬೇವು ಬೆಲ್ಲವನ್ನು ತಿಂದು ಹಿಂದಿನ ನೋವು ಮರೆತು ಸ್ನೇಹಿತರಿಗೆ ಯುಗಾದಿ ಹಬ್ಬದ ಶುಭಾಶಯಗಳನ್ನು ಹೇಳಿ ಯುಗಾದಿ ಹಬ್ಬ ಆಚರಿಸಲಾಗುತ್ತದೆ. ಕಳೆದ ವರ್ಷದ ಕಹಿ ಘಟನೆಗಳನ್ನು ಮರೆಯೋಣ, ಮತ್ತು ಸಿಹಿ ಘಟನೆಗಳನ್ನು ಸವಿಯೋಣ, ಎನ್ನುವ ಸಂದೇಶವನ್ನು ಯುಗಾದಿ ಹಬ್ಬವು ಬೇವು ಬೆಲ್ಲ ಹಂಚುವುದು ಮೂಲ ಉದ್ದೇಶ.




ಜೀವನದಲ್ಲಿ ಕಷ್ಟ ಸುಖಗಳು ಬರುತ್ತಲೇ ಇರುತ್ತವೆ. ಕಷ್ಟ ಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಸಮಾನವಾಗಿ ತೆಗೆದುಕೊಂಡು ಬಾಳಬೇಕೆಂಬುವ ಸಂಕೇತವನ್ನು ಯುಗಾದಿ ಹಬ್ಬ ಆಚರಣೆಯಿಂದ ತಿಳಿದುಕೊಳ್ಳಬಹುದಾಗಿದೆ. ಬೇವಿನ ಎಲೆ, ಹೂವು ಮತ್ತು ಬೆಲ್ಲದ ತುರಿ ಜೊತೆಗೆ ಸ್ವಲ್ಪ ತುಪ್ಪ ಹಾಕಿ ಕಲಿಸಿದ ಮಿಶ್ರಣವೇ ಬೇವು ಬೆಲ್ಲ.

ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಬೇವು ಬೆಲ್ಲ ಮನೆಯವರೆಲ್ಲ ತಿನ್ನುತ್ತಾರೆ. ಸಾಯಂಕಾಲ ಪಂಚಾಂಗ ಓದುವ ಕಾರ್ಯಕ್ರಮ ಮನೆಯ ಹಿರಿಯರು ಅಥವಾ ದೇವಸ್ಥಾನದ ಅರ್ಚಕರು ಪಂಚಾಂಗ ಓದುವುದನ್ನು ಎಲ್ಲರೂ ಕೇಳಿಸಿಕೊಳ್ಳುತ್ತಾರೆ. ಈ ಬೇವು ಬೆಲ್ಲದ ಸಂಭ್ರಮವೇ ಯುಗಾದಿ ಹಬ್ಬ.



**– ವಿ.ಎಂ.ಎಸ್.ಗೋಪಿ**
ಲೇಖಕರು, ಸಾಹಿತಿಗಳು
ಬೆಂಗಳೂರು.

## ಕೊಪ್ಪಳ ವಿವಿ ಅಂತರ ಕಾಲೇಜು ಖೋಖೋ

# ಗವಿಸಿದ್ಧೇಶ್ವರ ಕಾಲೇಜು ವಿದ್ಯಾರ್ಥಿನಿಯರ ತಂಡ ಚಾಂಪಿಯನ್




**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಕೊಪ್ಪಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಅಂತರ ಕಾಲೇಜು ಮಹಿಳೆಯರ ಖೋಖೋ ಪಂದ್ಯಾಟದಲ್ಲಿ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ತಂಡ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಮಾರ್ಚ್ 17ರಂದು ಗಂಗಾವತಿಯಲ್ಲಿ ಇರುವ ಎಸ್. ಕೆ.ಎನ್.ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ಸ್ಪರ್ಧೆಗಳು ನಡೆದಿದ್ದು, ವಿವಿಧ ಕಾಲೇಜುಗಳಿಂದ ಭಾಗವಹಿಸಿದ್ದ ತಂಡಗಳ ನಡುವಿನ ಕಠಿಣ ಪೈಪೋಟಿಯಲ್ಲಿ ಗವಿಸಿದ್ಧೇಶ್ವರ ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ಕೌಶಲ್ಯ ಮತ್ತು ಸಮನ್ವಯದ ಮೂಲಕ ಗಮನಸೆಳೆದರು.

ವಿದ್ಯಾರ್ಥಿನಿಯರ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಕಾರ್ಯದರ್ಶಿ ಡಾ. ಆರ್. ಮರೇಗೌಡ, ಪ್ರಾಚಾರ್ಯ ಡಾ. ಚನ್ನಬಸವ ಹಾಗೂ ಶ್ರೀ ಗವಿಸಿದ್ಧೇಶ್ವರ ಟ್ರಸ್ಟ್‌ನ ಆಡಳಿತ ಮಂಡಳಿ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ. ಅಲ್ಲದೆ ಕಾಲೇಜಿನ ದೈಹಿಕ ನಿರ್ದೇಶಕ ಶ್ರೀ ವಿನೋದ ಸಿ. ಮುದಿನಬಸನಗೌಡ ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿನಿಯರ ಸಾಧನೆಯನ್ನು ಶ್ಲಾಘಿಸಿ ಮುಂದಿನ ಸ್ಪರ್ಧೆಗಳಲ್ಲಿ ಇನ್ನಷ್ಟು ಸಾಧನೆ ಮಾಡಲು ಪ್ರೋತ್ಸಾಹಿಸಿದ್ದಾರೆ.

# ಮಾ. 20ರಂದು ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆ

**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಹೊಸಪೇಟೆ ಕಚೇರಿಯಲ್ಲಿ ಮಾರ್ಚ್ 20ರಂದು ಎಚ್‌ಟಿ ಮತ್ತು ಇಎಚ್‌ಟಿ ಗ್ರಾಹಕರ ಕುಂದುಕೊರತೆ ಸಭೆ ನಡೆಯಲಿದೆ ಎಂದು ಇಇ ಕೆ. ಸತೀಶ್ ತಿಳಿಸಿದ್ದಾರೆ.

ಜೆಸ್ಕಾಂ ವ್ಯಾಪ್ತಿಯ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಸ್ಯೆಗಳನ್ನು ತಿಳಿಸಿಕೊಳ್ಳಲು ಮನವಿ ಮಾಡಿದ್ದಾರೆ.

# ನಿಧನ

## ಸಂಗಪ್ಪ ಯಳಮಲಿ



**ಲಕ್ಷ್ಮೇಶ್ವರ:** ಪಟ್ಟಣದ ಪೇಠಬಣದ ಬಣಜಿಗ ಸಮಾಜದ ಹಿರಿಯ ಜೀವ ಸಂಗಪ್ಪ ಶಿವಪ್ಪ ಯಳಮಲಿ (93) ಇವರು ಮಂಗಳವಾರ ನಿಧನ ಹೊಂದಿರುವರು.

ಮೃತರಿಗೆ ಪತ್ನಿ, ಪುತ್ರ, ಮೂವರು ಪುತ್ರಿಯರು ಸೇರಿ ಅಪಾರ ಬಂಧು–ಬಳಗವಿದೆ.

## ಲೀಲಾವತಿ ಪಾಟೀಲ



**ಲಕ್ಷ್ಮೇಶ್ವರ:** ಪಟ್ಟಣದ ಹಿರೇಬಣದ ಪಂಚಮಸಾಲಿ ಸಮಾಜದ ಹಿರಿಯ ಜೀವ ಲೀಲಾವತಿ ಪರ್ವತಗೌಡ ಪಾಟೀಲ(94) ಇವರು ಮಂಗಳವಾರ ನಿಧನ ಹೊಂದಿರುವರು. ಮೃತರಿಗೆ ಐವರು ಪುತ್ರರು, ಇರ್ವರು ಪುತ್ರಿಯರು ಸೇರಿ ಅಪಾರ ಬಂಧು–ಬಳಗವಿದೆ.

## ತಿಮ್ಮಾಪೂರದಲ್ಲಿ ಶ್ರೀ ಮಾರುತೇಶ್ವರ ಜಾತ್ರೆ

# ಮಾ. 22ರಂದು ಅದ್ದೂರಿ ಮಹಾ ರಥೋತ್ಸವ



**■ವಿಜಯಸಾಕ್ಷಿ ಸುದ್ದಿ, ಗದಗ**

ತಾಲೂಕಿನ ತಿಮ್ಮಾಪೂರ ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಶ್ರೀ ಮಾರುತೇಶ್ವರ ಜಾತ್ರೆ ವೈಭವದಿಂದ ನಡೆಯಲಿದ್ದು, ಮಾರ್ಚ್ 22ರಂದು ಮಹಾ ರಥೋತ್ಸವ ಅದ್ದೂರಿಯಾಗಿ ಜರುಗಲಿದೆ.

ಅಂದು ಮಾರುತೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಸಂಜೆ 5.30 ಗಂಟೆಗೆ ಮಹಾ ರಥೋತ್ಸವ ನಡೆಯಲಿದ್ದು, ರಥೋತ್ಸವದಲ್ಲಿ ಡೊಳ್ಳಿನ ಮೇಳ, ಜಾಜ್ ಮೇಳ ಹಾಗೂ ಗೊಂಬೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿ ಸಂಭ್ರಮ ಹೆಚ್ಚಿಸಲಿವೆ.

ಜಾತ್ರಾ ಕಾರ್ಯಕ್ರಮಗಳ ಅಂಗವಾಗಿ ಈಗಾಗಲೇ ಮಾರ್ಚ್ 18ರಂದು ದೇವಸ್ಥಾನದಲ್ಲಿ ಅಮಾವಾಸ್ಯೆ ಪೂಜೆ ನೆರವೇರಿದ್ದು, ಮಾರ್ಚ್ 19ರಂದು ಪಾಡ್ಯ, ಗೋಪಾಳ ದಾಸಂಗ ತುಂಬಿಸುವುದು, 20ರಂದು ದೀಪಮಾಲೆ ಕಂಬಕ್ಕೆ ಪಂಚಾಮೃತ ಅಭಿಷೇಕ ಹಾಗೂ ಹೋಮ–ಹವನ ಕಾರ್ಯಕ್ರಮಗಳು ನಡೆಯಲಿವೆ.

ಮಾರ್ಚ್ 21ರಂದು ರಾತ್ರಿ 9.30 ಗಂಟೆಗೆ ಬಣ್ಣದ ಹೊಂಡ ತುಳುಕಿಸುವ ಸಂಪ್ರದಾಯ ನೆರವೇರಿದ ಬಳಿಕ ಲಘು ರಥೋತ್ಸವ ಜರುಗಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಲಕ್ಷ್ಮೀ ನಾರಾಯಣ ಹಾಗೂ ಶ್ರೀ ಬೀರಲಿಂಗೇಶ್ವರ ಸಂಘದ ಕಲಾವಿದರಿಂದ "ನೆಲೆ ತಪ್ಪಿದ ಮಗ" ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಇದಲ್ಲದೆ, ತಿಮ್ಮಾಪೂರ ಪ್ರೀಮಿಯರ್ ಲೀಗ್ ವತಿಯಿಂದ ಕ್ರಿಕೆಟ್ ಪಂದ್ಯಾವಳಿ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಗೆಳೆಯರ ಬಳಗದ ವತಿಯಿಂದ ಟಗರಿನ ಕಾಳಗ ಸ್ಪರ್ಧೆಗಳು ಕೂಡ ಆಯೋಜಿಸಲಾಗಿದೆ ಎಂದು ಜಾತ್ರಾ ಟ್ರಸ್ಟ್ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಳೆನೀರು ಮಾರ್ಗಗಳು ಮುಚ್ಚಿ ತ್ಯಾಜ್ಯ ನೀರು ಕೆರೆಗೆ – ಅಪೂರ್ಣ ಕಾಮಗಾರಿಯಿಂದ ಸಾರ್ವಜನಿಕರ ಆಕ್ರೋಶ!

# ಕೋಟಿ ಖರ್ಚಾದರೂ ಚರಂಡಿ ನೀರಿನ ಕಾಟ!





■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ:
ಪಟ್ಟಣದ ಏಕೈಕ ಇಟ್ಟಿಗೆಕೆರೆಯ ಅಭಿವೃದ್ಧಿಗೆ ಕಳೆದ ಹತ್ತಾರು ವರ್ಷಗಳಿಂದ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿದರೂ, ಕೆರೆಯೊಳಗೆ ಚರಂಡಿ ನೀರು ಹಾಗೂ ತ್ಯಾಜ್ಯ ಸೇರುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ಪ್ರಶ್ನಿಸಿದರೆ ಕೆಲ ಅಧಿಕಾರಿಗಳು ಉಡಾಫೆಯ ಉತ್ತರ ನೀಡುತ್ತಿರುವುದಾಗಿ ನಾಗರಿಕರು ಆರೋಪಿಸಿದ್ದಾರೆ.

> "ಕೋಟಿ ರೂಪಾಯಿ ಖರ್ಚಾದರೂ ಕೆರೆಗೆ ಚರಂಡಿ ನೀರು ಸೇರುವುದು ನಿಲ್ಲಿಲ್ಲ. ಕೆರೆ ಬಯಲು ಶೌಚ ಮತ್ತು ತ್ಯಾಜ್ಯಕ್ಕೆ ಮುಕ್ತವಾಗಿದೆ. ತುಂಗಭದ್ರಾ ನೀರು ತುಂಬಿಸುವ ಯೋಜನೆಯೂ ನೆನೆಗುದಿಗೆ ಬಿದ್ದಿದೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು."
> – **ಚನ್ನಪ್ಪ ಜಗಲಿ,** ತಾಪಂ ಮಾಜಿ ಸದಸ್ಯರು

> "ಮಳೆಯ ಪರಿಣಾಮವಾಗಿ ಕೆರೆಯಂಚಿನಲ್ಲಿ ನೀರು ಹೆಚ್ಚಾಗಿದೆ. ಕೆಲವರು ಜೆಸಿಬಿ ಮೂಲಕ ನೀರನ್ನು ಕೆರೆಗೆ ಹರಿಸಿದ್ದಾರೆ. ಸೋಮವಾರದಿಂದ ಬಾಕಿ ಇರುವ ಪೈಪ್ ಮತ್ತು ಪಿಚ್ಚಿಂಗ್ ಕಾಮಗಾರಿ ಪ್ರಾರಂಭವಾಗುತ್ತದೆ. ಮಳೆಗಾಲದೊಳಗೆ ಚರಂಡಿ ನೀರು ಕೆರೆಗೆ ಸೇರುವುದನ್ನು ತಡೆಯುತ್ತೇವೆ."
> – **ಮಾಂತೇಶ ಬೀಳಗಿ,** ಮುಖ್ಯಾಧಿಕಾರಿ, ಪುರಸಭೆ

ಕೆರೆಗಳ ಸಂರಕ್ಷಣೆಗೆ ಹೆಚ್ಚಿನ ಕಾಳಜಿ ಇರುವ ಜನಪ್ರತಿನಿಧಿಗಳು ಹಾಗೂ ಜಿಲ್ಲಾಧಿಕಾರಿಗಳು ತಕ್ಷಣ ಗಮನ ಹರಿಸಿ, ಇಟ್ಟಿಗೆಕೆರೆಯನ್ನು ಉಳಿಸಬೇಕು ಎಂಬುದು ಜನರ ಒತ್ತಾಯವಾಗಿದೆ.

**ನೀರಿನಂತೆ ಹಣ ಖರ್ಚು, ಫಲಿತಾಂಶ ಶೂನ್ಯ!** : ಜನ, ಜಾನುವಾರು, ಪಕ್ಷಿಗಳು ಹಾಗೂ ಜಲಮೂಲಕ್ಕೆ ಆಧಾರವಾಗಿರುವ ಈ ಕೆರೆಗೆ ಚರಂಡಿ ನೀರು ಮತ್ತು ತ್ಯಾಜ್ಯ ನಿರಂತರವಾಗಿ ಹರಿದು ಬರುತ್ತಿದೆ. ಕೆರೆಯ ಸುತ್ತಮುತ್ತ ಬಯಲು ಶೌಚ ಹಾಗೂ ತ್ಯಾಜ್ಯ ತೊಡಕು ಹೆಚ್ಚಾಗಿದೆ.

ಮಳೆನೀರಿನ ನೈಸರ್ಗಿಕ ಹರಿವಿನ ಮಾರ್ಗಗಳು ಮುಚ್ಚಲ್ಪಟ್ಟಿದ್ದು, ಕೇವಲ ಚರಂಡಿ ನೀರೇ ಕೆರೆಗೆ ಸೇರುತ್ತಿದೆ. ತುಂಗಭದ್ರಾ ನದಿ ನೀರು ತುಂಬಿಸುವ ಯೋಜನೆಯೂ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ.

### ಅವೈಜ್ಞಾನಿಕ ಕಾಮಗಾರಿ; ಆರೋಪ

ಮೂಲತಃ 12 ಎಕರೆ 30 ಗುಂಟೆ ಪ್ರದೇಶವಿದ್ದ ಕೆರೆ ಈಗ 10 ಎಕರೆ 11 ಗುಂಟೆಗೆ ಕುಸಿದಿದೆ. 2015–16: 50 ಲಕ್ಷ ವೆಚ್ಚದಲ್ಲಿ ದಕ್ಷಿಣ ಭಾಗದಲ್ಲಿ ಬಂಡ್ ನಿರ್ಮಾಣ, 2016–17: 50 ಲಕ್ಷ ವೆಚ್ಚದಲ್ಲಿ ಪೂರ್ವ ಭಾಗದಲ್ಲಿ ರಸ್ತೆ ನಿರ್ಮಾಣ, 2025–26: 56 ಲಕ್ಷ ವೆಚ್ಚದಲ್ಲಿ ಬಂಡ್ ಕಾಮಗಾರಿ ಪ್ರಗತಿಯಲ್ಲಿದೆ, ತಿಂಗಳೊಳಗೆ ಪೂರ್ಣಗೊಳ್ಳಬೇಕಿದ್ದ ಕಾಮಗಾರಿ ಇನ್ನೂ ಅಪೂರ್ಣವಾಗಿದೆ. ಪೈಪ್ ಅಳವಡಿಕೆ ಮತ್ತು ಕಲ್ಲು ಪಿಚ್ಚಿಂಗ್ ಕೆಲಸಗಳು ಬಾಕಿಯಿದ್ದು, ಇದರಿಂದ ಮಳೆ ನೀರಿನ ಜೊತೆಗೆ ಚರಂಡಿ ನೀರು ಕೆರೆಗೆ ಸೇರುತ್ತಿದೆ.

**ರೋಗಗಳ ಭೀತಿ, ತಕ್ಷಣ ಕ್ರಮಕ್ಕೆ ಆಗ್ರಹ** : ಮಳೆಗಾಲ ಆರಂಭವಾಗುತ್ತಿದ್ದಂತೆ ಕೆರೆಯಲ್ಲಿ ಕೊಳಚೆ ನೀರು ಸಂಗ್ರಹವಾಗಿ ರೋಗ–ರುಜಿನಗಳಿಗೆ ಕಾರಣವಾಗುವ ಸಾಧ್ಯತೆ ಇದೆ. ಆದ್ದರಿಂದ ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಚರಂಡಿ ನೀರು ಕೆರೆಗೆ ಸೇರುವುದನ್ನು ತಡೆಯಬೇಕು ಎಂದು ನಿವಾಸಿಗಳು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಸಂತೋಷ ಅಕ್ಕಿ ಗಂಭೀರ ಆರೋಪ

## ಕರ್ನಾಟಕದ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ!

■ವಿಜಯಸಾಕ್ಷಿ ಸುದ್ದಿ, ಗದಗ
ಕರ್ನಾಟಕದ ಕಾಂಗ್ರೆಸ್ ನೇತೃತ್ವದ ಆಡಳಿತವು "ಸಂಪೂರ್ಣವಾಗಿ ಕುಸಿದಿದೆ" ಎಂದು ಗದಗ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಸಂತೋಷ ಅಕ್ಕಿ ಗಂಭೀರ ಆರೋಪ ಮಾಡಿದ್ದಾರೆ.

ಸರ್ಕಾರವು ಶಾಸಕರ ಪ್ರಶ್ನೆಗಳಿಗೆ ಉತ್ತರಿಸದೇ ಸಭಾಧ್ಯಕ್ಷರನ್ನು ಸದನದಿಂದ ಹೊರಗೆ ಹೋಗುವ ಪರಿಸ್ಥಿತಿ ನಿರ್ಮಿಸಿದೆ. ಇದು ರಾಜ್ಯದಲ್ಲಿ ಸಾಂಸ್ಥಿಕ ನಿಯಮಗಳು ಹದಗೆಟ್ಟಿರುವುದಕ್ಕೆ ಸ್ಪಷ್ಟ ಸೂಚನೆ" ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ಖಂಡಿಸಿದ್ದಾರೆ.



ಅರ್ಹತೆ ಪಡೆದ ಸರ್ಕಾರವು ಮಾತ್ರ ತನ್ನ ರಾಜಕೀಯ ಬದ್ಧತೆಯನ್ನು ಕಾಯ್ದುಕೊಳ್ಳಲು 93,000 ಕೋಟಿ ತುರ್ತು ಸಾಲ ತೆಗೆದುಕೊಳ್ಳುವುದರಿಂದ ರಾಜ್ಯದ ಒಟ್ಟು ಸಾಲ 8.24 ಲಕ್ಷ ಕೋಟಿ ತಲುಪುವ ಭೀತಿ ಉಂಟಾಗಿದೆ. ಇದರಿಂದ ಕರ್ನಾಟಕದ ಯುವಜನತೆ ಹಾಗೂ ಭವಿಷ್ಯ ಗಂಭೀರ ಪ್ರಮಾಣದಲ್ಲಿ ಪ್ರಭಾವಿತವಾಗಿದೆ ಎಂದು ಸಂತೋಷ ಅಕ್ಕಿ ಹೇಳಿದ್ದಾರೆ.

ಈ ಆರ್ಥಿಕ ದುರುಪಯೋಗವು ಅಗತ್ಯ ಸೇವೆಗಳ ಅವನತಿಗೆ ನೇರ ಕಾರಣವಾಗಿದ್ದು ರಾಜ್ಯಾದ್ಯಂತ 600ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ಮುಚ್ಚಲ್ಪಟ್ಟಿರುವುದು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವ ಉಳಿಸುವ ಔಷಧಿಗಳ ತೀವ್ರ ಅಭಾವವಿರುವುದನ್ನು ಅವರು ಎತ್ತಿ ತೋರಿಸಿದ್ದಾರೆ. ಆಡಳಿತ ಪಕ್ಷದ ಶಾಸಕರಾದ ರಾಜು ಕಾಗೆ ಅವರ ಬಂಡಾಯವು ಸರ್ಕಾರದ ವೈಫಲ್ಯಕ್ಕೆ ಅವರ ಸ್ವಂತ ಪಕ್ಷದ ಒಳಗಿನಿಂದಲೇ ಸಿಕ್ಕಿರುವ "ಅಪ್ಪಟ ಪುರಾವೆ" ಎಂದು ಸಂತೋಷ ಅಕ್ಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಮಾರು 6,000 ಕೋಟಿ ಅಬಕಾರಿ ಹಗರಣ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ಮುಡಾ (ಒಗಆಂ) ನಿವೇಶನ ಹಂಚಿಕೆ ವಿವಾದಗಳ ಬಗ್ಗೆ ತಕ್ಷಣದ ಉತ್ತರದಾಯಿತ್ವಕ್ಕೆ ಒತ್ತಾಯಿಸಿರುವ ಅವರು ಸರ್ಕಾರದ ಗಮನವು ಅಭಿವೃದ್ಧಿಯಿಂದ ಭ್ರಷ್ಟಾಚಾರದ ಕಡೆಗೆ ಸಂಪೂರ್ಣವಾಗಿ ವರ್ಗಾವಣೆಗೊಂಡಿದೆ ಎಂದು ಆರೋಪಿಸಿದ್ದಾರೆ. "ರಾಜ್ಯದಲ್ಲಿ ಸ್ಥಗಿತಗೊಂಡಿರುವ ಮೂಲಸೌಕರ್ಯ ಯೋಜನೆಗಳಿಂದ ಹಿಡಿದು ರಾಜ್ಯದ ಖಾಲಿಯಾಗಿರುವ ಖಜಾನೆಯವರೆಗೆ ಪ್ರತಿಯೊಂದು ಸೂಚಕವು ಈ ಸರ್ಕಾರವು ಆಡಳಿತ ನಡೆಸುವ ನೈತಿಕ ಮತ್ತು ಕಾರ್ಯಾತ್ಮಕ ಅಧಿಕಾರವನ್ನು ಕಳೆದುಕೊಂಡಿದೆ ಎಂದು ಗುಡುಗಿದ್ದಾರೆ.

ಅಕಾಲಿಕ ಗಾಳಿ–ಮಳೆಗೆ ಲಕ್ಷಾಂತರ ರೂ. ನಷ್ಟ – 2 ಎಕರೆ ಬಾಳೆ ತೋಟ ಹಾನಿ – ರೈತರಿಗೆ ತಕ್ಷಣ ಪರಿಹಾರಕ್ಕೆ ಆಗ್ರಹ

## ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ – ಬಿರುಗಾಳಿಗೆ ಬಾಳೆ ತೋಟ ಸರ್ವನಾಶ!



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ,
ಮಂಗಳವಾರ ರಾತ್ರಿ ಬೀಸಿದ ಅಕಾಲಿಕ ಗಾಳಿ–ಮಳೆಗೆ ತಾಲ್ಲೂಕಿನ ತಂಬ್ರಹಳ್ಳಿಯಲ್ಲಿ ರೈತರ ಬೆಳೆಗಳು ಭಾರೀ ಹಾನಿಗೊಳಗಾಗಿವೆ. ವಿಶೇಷವಾಗಿ ರೈತ ಪ್ರಭುರೆಡ್ಡಿ ಅವರ 2 ಎಕರೆ ಏಲಕ್ಕಿ ಬಾಳೆ ತೋಟ ಸಂಪೂರ್ಣ ನೆಲಕ್ಕುರುಳಿದ್ದು, ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ.

> "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಇಷ್ಟು ದಿನ ಕಷ್ಟಪಟ್ಟು ಬೆಳೆದ ಬೆಳೆ ಕ್ಷಣದಲ್ಲೇ ಹಾಳಾಯಿತು," ಎಂದು ರೈತ ಪ್ರಭುರೆಡ್ಡಿ ತಮ್ಮ ನೋವನ್ನು ಹೊರಹಾಕಿದರು.

"ನಿನ್ನೆ ಒಂದೂವರೆ ಟನ್ ಬಾಳೆ ಕಟಾವು ಮಾಡಿ ಕೊಟ್ಟಿದ್ದೆವು. ಇನ್ನೊಂದು ವಾರ ಬಿಟ್ಟರೆ ಬಹುತೇಕ ಗೊಂಚಲುಗಳು ಕಟಾವಿಗೆ ಸಿದ್ಧವಾಗುತ್ತವೆ, 6–7 ಲಕ್ಷ ಆದಾಯ ಬರುತ್ತದೆ ಎಂದು ಕನಸು ಕಂಡಿದ್ದೆ. ಆದರೆ ಬೆಳಗ್ಗೆ ಪಕ್ಕದ ಹೊಲದ ಶ್ರೀನಿವಾಸ ಕರೆ ಮಾಡಿ 'ನಿಮ್ಮ ತೋಟ ಗಾಳಿಗೆ ನೆಲಕ್ಕುರುಳಿದೆ' ಎಂದಾಗ ಕನಸು ನುಚ್ಚುನೂರಾಯಿತು" ಎಂದು ಹೇಳುವಾಗ ಪ್ರಭುರೆಡ್ಡಿ ಕಣ್ಣೀರಿಟ್ಟರು.

ಸುಮಾರು 2400 ಬಾಳೆ ಗಿಡಗಳನ್ನು ಬೆಳೆಸಿದ್ದ ಅವರು ಲಕ್ಷಾಂತರ ರೂ. ಹೂಡಿಕೆ ಮಾಡಿದ್ದರು. ನಿನ್ನೆ ತಾನೇ ಮೊದಲ ಕಟಾವು ಮಾಡಿ ಸುಮಾರು 50 ಸಾವಿರ ರೂ. ಗಳಿಸಿದ್ದರು. ಮುಂದಿನ ದಿನಗಳಲ್ಲಿ ಹೆಚ್ಚಿನ ಲಾಭದ ನಿರೀಕ್ಷೆಯಲ್ಲಿದ್ದರೂ, ಬಿರುಗಾಳಿ ಆ ಕನಸುಗಳನ್ನು ಕ್ಷಣಾರ್ಧದಲ್ಲೇ ಭಸ್ಮಗೊಳಿಸಿದೆ.

ಗಾಳಿ ಜೋರಾಗಿ ಬೀಸಿದ ಪರಿಣಾಮ ಬಹುತೇಕ ಎಲ್ಲಾ ಗಿಡಗಳು ನೆಲಕ್ಕುರುಳಿದ್ದು, ಕಟಾವಿಗೆ ಸಿದ್ಧವಾಗಿದ್ದ ಗೊಂಚಲುಗಳು ಹಾನಿಗೊಳಗಾಗಿವೆ. ಈ ದೃಶ್ಯ ರೈತರ ಹೃದಯ ಕಲುಕುವಂತಿದೆ.

ಇದೇ ರೀತಿ ಬನ್ನಿಗೋಳ ಗ್ರಾಮದ ಮೈನಳ್ಳಿ ಕೃಷ್ಣಪ್ಪ ಅವರ ಪುತ್ರ ನಿಂಗಾರೆಡ್ಡಿ ಅವರ ಸ್ಥಿತಿಯೂ ಕಳವಳಕಾರಿ. ಮುಂಗಾರಿನಲ್ಲಿ 5 ಎಕರೆ ಈರುಳ್ಳಿ ಬೆಳೆದು ಮಳೆ ಮತ್ತು ಬೆಲೆ ಕುಸಿತದಿಂದ ನಷ್ಟ ಅನುಭವಿಸಿದ್ದ ಅವರು, ಇದೀಗ 2.5 ಎಕರೆ ಪ್ರದೇಶದಲ್ಲಿ ಬೆಳೆದ ಸುಮಾರು 3000 ಏಲಕ್ಕಿ ಬಾಳೆ ಗಿಡಗಳು ನೆಲಕ್ಕುರುಳಿವೆ.

ಇನ್ನೊಬ್ಬ ರೈತ ವೆಂಕನಗೌಡ ಅವರ 5 ಎಕರೆ ಮೆಕ್ಕೆಜೋಳ ಬೆಳೆ ಕೂಡ ಗಾಳಿಯ ಹೊಡೆತಕ್ಕೆ ಹಾನಿಗೊಳಗಾಗಿ ಲಕ್ಷಾಂತರ ನಷ್ಟ ಉಂಟಾಗಿದೆ.

ತಂಬ್ರಹಳ್ಳಿ ಹೋಬಳಿಯ ಪ್ರಗತಿಪರ ರೈತ ರವಿ ಪ್ರಸಾದ್ ಮಾತನಾಡಿ, "ಬಾರಿ ಗಾಳಿ–ಮಳೆಯಿಂದ ಅಪಾರ ಬಾಳೆ ಬೆಳೆ ನಷ್ಟವಾಗಿದೆ. ಸಂಬಂಧಪಟ್ಟ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರಿಗೆ ನೆರವು ನೀಡಬೇಕು. ಬೆಂಬಲ ಬೆಲೆ ಇಲ್ಲದೆ, ಅಕಾಲಿಕ ಮಳೆ–ಗಾಳಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ" ಎಂದು ಆಗ್ರಹಿಸಿದರು.

ತಂಬ್ರಹಳ್ಳಿ ಹೋಬಳಿಯ ವಿವಿಧ ಹಳ್ಳಿಗಳಲ್ಲಿ ಹಿಂಗಾರಿನಲ್ಲಿ ಬೆಳೆದ ರಾಗಿ ಬೆಳೆ ಕೂಡ ಗಾಳಿಯ ಹೊಡೆತಕ್ಕೆ ನೆಲಕ್ಕೊರಗಿದೆ. ಈ ಅಕಾಲಿಕ ಪ್ರಕೃತಿ ವಿಕೋಪದಿಂದ ರೈತರಿಗೆ ಭಾರೀ ಆರ್ಥಿಕ ಹೊಡೆತ ಬಿದ್ದಿದ್ದು, ಸರ್ಕಾರ ತಕ್ಷಣ ಪರಿಹಾರ ನೀಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

## ಗದಗದಲ್ಲಿ ಜಾಬ್ ಮೇಳಕ್ಕೆ ಸಜ್ಜು: ಸಾವಿರಾರು ಯುವಕರಿಗೆ ಉದ್ಯೋಗಾವಕಾಶ



■ವಿಜಯಸಾಕ್ಷಿ ಸುದ್ದಿ, ಗದಗ
ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪೂರ್ಣಗೊಳಿಸಿದ ನಂತರ ಕೌಶಲ್ಯದ ಕೊರತೆಯಿಂದ ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಉದ್ಯೋಗ ಮೇಳವು ಯುವಕರಿಗೆ ವೇದಿಕೆಯಾಗಿ ಪರಿಣಮಿಸುತ್ತದೆ ಎಂದು ಚಾರ್ಟರ್ಡ್ ಅಕೌಂಟೆಂಟ್ ಸಿ.ಎ. ನಟರಾಜ್ ಮೂರಶಿಳ್ಳಿ ಹೇಳಿದರು.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಹತ್ವದ ಹೆಜ್ಜೆ ಇಟ್ಟಿದ್ದು, ಎಪ್ರಿಲ್ ಎರಡನೇ ವಾರದಲ್ಲಿ ನಗರದಲ್ಲಿನ ಕೆ.ಎಚ್. ಪಾಟೀಲ ಸಭಾಭವನದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲು ಸಿದ್ಧತೆ ನಡೆಸಿದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹಿಂದಿನ ಉದ್ಯೋಗ ಮೇಳದಲ್ಲಿ 1000ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಉದ್ಯೋಗ ದೊರೆತಿದ್ದು, ಈ ಬಾರಿ ಇನ್ನಷ್ಟು ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವ ಉದ್ದೇಶ ಹೊಂದಿದ್ದೇವೆ ಎಂದು ತಿಳಿಸಿದರು.

ಸಭೆಯಲ್ಲಿ ಮಾತನಾಡಿದ ಪ್ಲೇಸ್ಮೆಂಟ್ ಅಧಿಕಾರಿ ಗಿರೀಶ್, ಈ ಬೃಹತ್ ಉದ್ಯೋಗ ಮೇಳದಲ್ಲಿ 60ಕ್ಕೂ ಹೆಚ್ಚು ಪ್ರಮುಖ ಕಂಪನಿಗಳು ಭಾಗವಹಿಸುವ ನಿರೀಕ್ಷೆ ಇದೆ. ಎಪ್ರಿಲ್ ವೇಳೆಗೆ ಪರೀಕ್ಷೆಗಳು ಮುಗಿದಿರುವುದರಿಂದ ವಿದ್ಯಾರ್ಥಿಗಳಿಗೆ ಇದು ಸೂಕ್ತ ಸಮಯ ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಮಾತನಾಡಿ, ಸಂಸ್ಥೆ ಕಳೆದ 50 ವರ್ಷಗಳಿಂದ ಸೇವಾ ಮನೋಭಾವದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಸುವರ್ಣ ಮಹೋತ್ಸವವನ್ನು ಯಶಸ್ವಿಯಾಗಿ ಆಚರಿಸಿದೆ. ಹಿಂದಿನ ಉದ್ಯೋಗ ಮೇಳದಲ್ಲಿ 5,000ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದ್ದು, ಅದರಲ್ಲಿ 1,000ಕ್ಕೂ ಹೆಚ್ಚು ಯುವಕರಿಗೆ ಉದ್ಯೋಗ ದೊರೆತಿರುವುದು ಸಂತೋಷದ ಸಂಗತಿ. ಈ ಬಾರಿಯೂ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಿದ್ದೇವೆ ಎಂದು ಹೇಳಿದರು. ಎಲ್ಲ ಶೈಕ್ಷಣಿಕ ಸಂಸ್ಥೆಗಳು ಕೈಜೋಡಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಸಭೆಯಲ್ಲಿ ಗದಗ–ಬೆಟಗೇರಿ ಅವಳಿ ನಗರಗಳ ವಿವಿಧ ಪದವಿ ಪೂರ್ವ, ಪದವಿ, ಇಂಜಿನಿಯರಿಂಗ್, ನರ್ಸಿಂಗ್, ಐಟಿಐ, ಬಿ.ಸಿ.ಎ., ಬಿ.ಬಿ.ಎ. ಹಾಗೂ ಡಿಪ್ಲೋಮಾ ಕಾಲೇಜುಗಳ ಪ್ರಾಚಾರ್ಯರು ಭಾಗವಹಿಸಿ ಚರ್ಚಿಸಿದರು.

## ಶಾಂತವಾಗಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

▸▸ಮೊದಲನೇ ಪುಟದಿಂದ

ಬುಧವಾರ ನಡೆದ ಕನ್ನಡ ಪ್ರಶ್ನೆಪತ್ರಿಕೆ ಪರೀಕ್ಷೆಗೆ ತಾಲೂಕಿನ ಬಿಸಿಎನ್ ಪ್ರೌಢಶಾಲೆ, ಪಾರ್ವತಿ ಮಕ್ಕಳ ಬಳಗದ ಪ್ರೌಢಶಾಲೆ, ಉಮಾ ವಿದ್ಯಾಲಯ ಪ್ರೌಢಶಾಲೆ, ಪು. ಬಡ್ನಿ ಸರಕಾರಿ ಪ್ರೌಢಶಾಲೆ, ಶಿಗ್ಲಿ ಎಸ್‌ಎಸ್‌ಕೆ ಪ್ರೌಢಶಾಲೆ ಹಾಗೂ ಬಾಲೆಹೊಸೂರು ಸರಕಾರಿ ಪ್ರೌಢಶಾಲೆ ಸೇರಿ ಒಟ್ಟು 6 ಪರೀಕ್ಷಾ ಕೇಂದ್ರಗಳಲ್ಲಿ 1,592 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಇವರಲ್ಲಿ 15 ವಿದ್ಯಾರ್ಥಿಗಳು ಗೈರುಹಾಜರಾಗಿದ್ದರು.

ಪರೀಕ್ಷಾ ಅವಧಿಯಲ್ಲಿ ಯಾವುದೇ ನಕಲು ಪ್ರಕರಣಗಳು ದಾಖಲಾಗದೆ, ಪರೀಕ್ಷೆಗಳು ಶಾಂತಿಯುತವಾಗಿ ನಡೆದವು. ಜಾಗೃತ ದಳದ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಎನ್. ನಾಯ್ಕ್ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ವಿವಿಧ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ದುರ್ಗಾದೇವಿ ಜಾತ್ರಾ ಕಮಿಟಿ ಅಧ್ಯಕ್ಷರಾಗಿ ಸಿದ್ದಣ್ಣ ಪಲ್ಲೇದ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ
ನಗರದ ಐತಿಹಾಸಿಕ ಗಂಗಾಪುರಪೇಟೆಯಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವ ಸಮಿತಿಯ ನೂತನ ಅಧ್ಯಕ್ಷರಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿದ್ದಣ್ಣ ಪಲ್ಲೇದ ಅವರನ್ನು ಆಯ್ಕೆ ಮಾಡಲಾಯಿತು.

ಶ್ರೀ ದುರ್ಗಾದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಎಂ.ಎಸ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ



ಸರ್ವಾನುಮತದಿಂದ ಸಿದ್ದಣ್ಣ ಪಲ್ಲೇದ ಅವರನ್ನು ಆಯ್ಕೆ ಮಾಡಲಾಯಿತು. 2026ನೇ ಸಾಲಿನ ಜಾತ್ರಾ ಮಹೋತ್ಸವ ಸಮಿತಿಯ ಸಭೆಯಲ್ಲಿ ಈ ನೇಮಕವನ್ನು ಅಧಿಕೃತವಾಗಿ ಘೋಷಿಸಲಾಯಿತು.

ಸಭೆಯಲ್ಲಿ, ಮೂರು ವರ್ಷಕ್ಕೆ ಒಂದೇ ಬಾರಿ ನಡೆಯುವ ದುರ್ಗಾದೇವಿ ಜಾತ್ರಾ ಮಹೋತ್ಸವವನ್ನು ಭಕ್ತಿಪೂರ್ವಕ ಹಾಗೂ ವೈಭವೋಪೇತವಾಗಿ ಆಯೋಜಿಸುವ ಕುರಿತಾಗಿ ಸುದೀರ್ಘ ಚರ್ಚೆ ನಡೆಯಿತು. ಸಭೆಯಲ್ಲಿ ಟ್ರಸ್ಟ್ ಉಪಾಧ್ಯಕ್ಷ ಬಸವರಾಜ ಬೆಳದಡಿ, ಪ್ರಧಾನ ಕಾರ್ಯದರ್ಶಿ ಸಂಜೀವ್ ಚವ್ಹಾಣ, ಕೋಶಾಧ್ಯಕ್ಷ ಬಸವರಾಜ ಅಣ್ಣಿಗೇರಿ ಸೇರಿದಂತೆ ಟ್ರಸ್ಟ್ ಸದಸ್ಯರು ಹಾಗೂ ವಿವಿಧ ಸಮಿತಿ ಸದಸ್ಯರು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ
**ಪುರಸಭೆ ಕಾರ್ಯಾಲಯ, ಗಜೇಂದ್ರಗಡ**
ಕ್ರಸಂ:ಪುಸಗ/ಕಾವಿ/15ನೇ ಹಣಕಾಸು/ಉಳಿಕೆ ಮೊತ್ತ/ವಹಿ/ವಿ.ಅ/2025–26 ದಿನಾಂಕ:17–03–2026

**(ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ)**

ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಇ–ಪ್ರೋಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಗಜೇಂದ್ರಗಡ ಪುರಸಭೆಗೆ ಸರ್ಕಾರದಿಂದ ಬಿಡುಗಡೆಯಾದ ಸನ್–2023–24 ಮತ್ತು 2024–25ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿಕೆ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ **1) DMA/2025-26/BR/WORK_INDENT56546, ರೂ. 9.33 ಲಕ್ಷ, 2) DMA/2025-26/BR/WORK_INDENT56543 ರೂ.14.15ಲಕ್ಷ,** ಒಟ್ಟು 02 ಕಾಮಗಾರಿಗಳ ಮೊತ್ತ **ರೂ. 23.48 ಲಕ್ಷ**ಗಳ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯೂ–1 ದಸ್ತಾವೇಜ್‌ನಲ್ಲಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ದಾಖಲೆಗಳಿಗಾಗಿ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1. ಇ–ಪ್ರ್ಯೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 25–03–2026 ಸಾಯಂಕಾಲ 4:30 ಗಂಟೆ**ಯ ವರೆಗೆ
2. ಟೆಂಡರ್‌ನ್ನು ತೆರೆಯುವ ದಿನಾಂಕ: **26–03–2026ರಂದು ಸಮಯ ಸಂಜೆ 4:30.00 ಗಂಟೆಗೆ.**

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್. http://eproc.karnataka.gov.in ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

**ಸಹಿ/–ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ** — **ಸಹಿ/–ಆಡಳಿತಾಧಿಕಾರಿ ಪುರಸಭೆ ಗಜೇಂದ್ರಗಡ**

ವಾ.ಸಾ.ಇ/ಗದಗ/718/ದೇಶಪಾಂಡೆಪಬ್ಲಿಸಿಟಿ/2025–26

ಇಂದು ಮಾರುತಿ ದೇವರ ಹೊಂಡ ತುಳುಕಿಸುವ ಕಾರ್ಯಕ್ರಮ

# ಲಕ್ಕುಂಡಿಯಲ್ಲಿ ಯುಗಾದಿ ಹಬ್ಬದ ಸಂಭ್ರಮ




■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಯುಗಾದಿ ಹಬ್ಬದ ಅಂಗವಾಗಿ ಹೊಸ ವರ್ಷದ ಸಂಭ್ರಮವನ್ನು ಆಚರಿಸುವ ಹಿನ್ನೆಲೆಯಲ್ಲಿ, ಲಕ್ಕುಂಡಿ ಪಟ್ಟಣದ ಪ್ಯಾಟಿ ಹನುಮಂತ ದೇವರ ಹೊಂಡ ತುಳುಕಿಸುವ ಪರಂಪರೆಯ ಕಾರ್ಯಕ್ರಮ ಮಾರ್ಚ್ 19ರ ಸಂಜೆ 4 ಗಂಟೆಗೆ ವೈಭವದಿಂದ ನಡೆಯಲಿದೆ.

ದಾನ ಚಿಂತಾಮಣಿ ಅತ್ತಿಮಬ್ಬೆ ಮಹಾದ್ವಾರದ ಸಮೀಪದ ಮಾರುತಿ ದೇವಸ್ಥಾನದ ಮುಂಭಾಗದಲ್ಲಿ ಸುಮಾರು 10 ಅಡಿ ಆಳದಲ್ಲಿ ತೋಡಲಾಗಿರುವ ಹೊಂಡವನ್ನು ನೀರಿನಿಂದ ತುಂಬಿಸಿ, ಕೇಸರಿ ಬಣ್ಣ ಮಿಶ್ರಣ ಮಾಡಲಾಗುತ್ತದೆ. ದೇವಸ್ಥಾನದ ಪೂಜಾರಿ ಮೊದಲಿಗೆ ಹೊಂಡ ತುಳುಕಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಬಳಿಕ ಗ್ರಾಮದ ಯುವಕರು ಸಂಭ್ರಮದಿಂದ ಪಾಲ್ಗೊಳ್ಳಲಿದ್ದಾರೆ.

ಈ ಆಚರಣೆಗೆ ಮುನ್ನ ಗ್ರಾಮದಲ್ಲಿನ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ಬಳಿಕ ಕುಂಬಾರರ ಮನೆಯಿಂದ ಐರಾಣಿ ತಂದು ಹೊಂಡಕ್ಕೆ ಪೂಜೆ ನೆರವೇರಿಸುವ ಸಂಪ್ರದಾಯವೂ ನಡೆಯಲಿದೆ. ಬೆಳಿಗ್ಗೆ ಮಾರುತಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗುವುದಲ್ಲದೆ, ಪ್ರಾತಃಕಾಲದಲ್ಲಿ ಪ್ರಾರ್ಥನೆ ಮತ್ತು ರುದ್ರಾಭಿಷೇಕ ಕಾರ್ಯಕ್ರಮಗಳು ನಡೆಯಲಿವೆ.

ಸಂಜೆ 7 ಗಂಟೆಗೆ ಜಾನಪದ ಕಲಾ ಕಾರ್ಯಕ್ರಮಗಳೂ ಆಯೋಜಿಸಲಾಗಿದ್ದು, ಹರೀಶ್ ಮತ್ತು ನಾಗೇಶ ಅವರ ಗೀ-ಗೀ ಪ್ರದರ್ಶನ ನಡೆಯಲಿದೆ.

ರಾಜ್ಯ ಜಾನಪದ ಕಲಾವಿದ ಬಸವರಾಜ ಹಡಗಲಿ ಹಾಗೂ ಯಲ್ಲವ್ವ ಸಾಲಮನಿ ತಂಡದವರಿಂದ ಸವಾಲಿನ ಗೀ-ಗೀ ಪದಗಳು ಪ್ರೇಕ್ಷಕರನ್ನು ಮನರಂಜಿಸಲಿವೆ.

ಹರ್ಲಾಪೂರ ಕೊಟ್ಟೂರೇಶ್ವರ ಮಠದ ಡಾ. ಕೊಟ್ಟೂರೇಶ್ವರ ಶ್ರೀಗಳು ಮತ್ತು ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಶ್ರೀಗಳು ಸಾನಿಧ್ಯ ವಹಿಸಲಿದ್ದು, ಶಂಕ್ರಯ್ಯ ಹಿರೇಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ-2031ಕ್ಕೆ ದತ್ತಾಂಶ ಸಂಗ್ರಹಣೆಗೆ ಸೂಚನೆ

# ಜಿಲ್ಲಾ ಅಭಿವೃದ್ಧಿಗೆ ಬ್ಲೂಪ್ರಿಂಟ್!



"ಜಿಲ್ಲಾ ಮಾನವ ಅಭಿವೃದ್ಧಿ ವರದಿ ಜನರ ಜೀವನಮಟ್ಟ ಸುಧಾರಣೆಗೆ ದಿಕ್ಕು ತೋರಿಸುವ ಮಹತ್ವದ ದಾಖಲೆ ಆಗಲಿದೆ."

– ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ, ಗದಗ

## ವರದಿಯ ಪ್ರಮುಖ ಉದ್ದೇಶಗಳು

1)ಜಿಲ್ಲೆಯ ಜನರ ಜೀವನಮಟ್ಟದ ಸಮಗ್ರ ವಿಶ್ಲೇಷಣೆ
2)ಸಾಮಾಜಿಕ-ಆರ್ಥಿಕ ಸ್ಥಿತಿಯ ಅಂಕಿ-ಅಂಶ ಸಂಗ್ರಹ
3)ಅಭಿವೃದ್ಧಿ ಅಗತ್ಯಗಳ ಗುರುತುಪಡಿಕೆ
4)ಹೊಸ ಯೋಜನೆಗಳ ರೂಪರೇಖೆಗೆ ಸಹಕಾರ
5)2031ರ ಸುಸ್ಥಿರ ಅಭಿವೃದ್ಧಿಗೆ ದಿಕ್ಕು ನಿರ್ಧಾರ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ-2031 ರ ವರದಿ ತಯಾರಿಕೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ವಲಯವಾರು ಉಪಸಮಿತಿಗಳ ಸಭೆ ಬುಧವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎನ್. ಶ್ರೀಧರ್ ಅಧ್ಯಕ್ಷತೆ ವಹಿಸಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಮಾತನಾಡಿ, ಜಿಲ್ಲಾ ಮಾನವ ಅಭಿವೃದ್ಧಿ ವರದಿಯು ಸಮಗ್ರ ಅಭಿವೃದ್ಧಿ ಹಾಗೂ ಜನರ ಜೀವನಮಟ್ಟ ಸುಧಾರಣೆಗೆ ಮಹತ್ವದ ದಾಖಲೆ ಆಗಲಿದೆ ಎಂದು ಹೇಳಿದರು. ಈ ವರದಿಯಲ್ಲಿ ಜಿಲ್ಲೆಯ ಜನರ ಜೀವನಮಟ್ಟ, ಸಾಮಾಜಿಕ-ಆರ್ಥಿಕ ಸ್ಥಿತಿ ಹಾಗೂ ಅಭಿವೃದ್ಧಿ ಅಗತ್ಯಗಳ ಕುರಿತ ಅಂಕಿ-ಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಇದರಿಂದ ಹೊಸ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಜಿಲ್ಲೆಯ 2031ರ ಸುಸ್ಥಿರ ಅಭಿವೃದ್ಧಿ ಯೋಜನೆ ರೂಪಿಸುವ ಹಿನ್ನಲೆಯಲ್ಲಿ, ಪ್ರತಿ ಇಲಾಖೆ ತಮ್ಮ ವ್ಯಾಪ್ತಿಯ ಸಮಗ್ರ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಬೇಕು ಎಂದು ಅವರು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ ಅವರು ಸ್ವಾಗತಿಸಿ, ಸುಸ್ಥಿರ ಅಭಿವೃದ್ಧಿ ಯೋಜನೆ ವರದಿ ಸಿದ್ಧಪಡಿಸಲು ಸಂಬಂಧಿಸಿದ ಎಲ್ಲಾ ಇಲಾಖೆಗಳು ಅಗತ್ಯ ಮಾಹಿತಿಯನ್ನು ಒದಗಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಪದ್ಮಾವತಿ ಜಿ., ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಎಸ್. ನೀಲಗುಂದ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ರಂಜಾನ್ ವೇಳೆ ಅಕ್ರಮ ಗೋಸಾಗಾಟ ತಡೆಗೆ ಕ್ರಮ ಕೈಗೊಳ್ಳಿ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ರಂಜಾನ್ ಹಬ್ಬದ ಸಂದರ್ಭದಲ್ಲಿ ಅಕ್ರಮ ಗೋಸಾಗಾಟ ಮತ್ತು ಗೋಹತ್ಯೆ ತಡೆಯಲು ಕಾನೂನುಬದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಹಿಂದೂ ಜನಜಾಗೃತಿ ಸಮಿತಿಯಿಂದ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರ ಹಾಗೂ ರಾಜ್ಯ ಗೃಹ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಹಿಂದೂ ಧರ್ಮದ ಪ್ರಕಾರ ಹಸುವನ್ನು ಗೋಮಾತೆ ಎಂದು ಪೂಜಿಸಲಾಗುತ್ತಿದ್ದು, ಅದಕ್ಕೆ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ವವಿದೆ. ಜೊತೆಗೆ ಗೋವುಗಳು ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಪ್ರಮುಖ ಆಧಾರವಾಗಿವೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ, ವಿಶೇಷವಾಗಿ ಹಬ್ಬಗಳ ಸಂದರ್ಭಗಳಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಅಕ್ರಮ ಗೋಸಾಗಾಟ ಮತ್ತು ಗೋಹತ್ಯೆ ನಡೆಯುತ್ತಿರುವುದಾಗಿ ವರದಿಗಳು ತಿಳಿಸುತ್ತಿವೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿಗಳ ವಧೆ ನಡೆಯುವುದರಿಂದ ಸಾರ್ವಜನಿಕ ಆರೋಗ್ಯ, ಪರಿಸರ ಹಾಗೂ ಕಾನೂನು-ಸುವ್ಯವಸ್ಥೆಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಲಾಗಿದೆ.

ರಾಜ್ಯದಲ್ಲಿ ಗೋಹತ್ಯೆ ನಿಷೇಧಕ್ಕೆ ಸಂಬಂಧಿಸಿದ ಕಾನೂನುಗಳಿದ್ದರೂ, ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಅಕ್ರಮ ಚಟುವಟಿಕೆಗಳನ್ನು ತಡೆಯಲು ಮುಂಚಿತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ವೀರಪ್ಪ ಸೋಗಿ, ಎಸ್. ತಿಪ್ಪೇಸ್ವಾಮಿ, ನಾಗಭೂಷಣ ಗದ್ದಿಕೆರೆ, ಪ್ರಮೋದ ಎಸ್. ಮೇಘರಾಜ, ಆರ್.ಬಿ. ಚೆನ್ನಬಸಪ್ಪ, ರಾಮಪ್ಪ, ಮಲ್ಲಿಕಾರ್ಜುನ, ಚಂದ್ರಮೌಳಿ, ಶಿವರಾಜ, ಮಲ್ಲಪ್ಪ, ಶಿವಪುತ್ರಪ್ಪ, ತೋಟಪ್ಪ ಕರಣಿ, ಅರವಿಂದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

















VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka